Dr. H.C.Mahadevappa: The concept pf Primary Health Centre and CHC is to provide Primary Health Care. ಅವೆಲ್ಲಾ ರೂರಲ್‌ನಲ್ಲಿರುವುದರಿಂದ ಮತ್ತು ಎಎನ್‌ಎಂ ಸಬ್ ಸೆಂಟರ್ಸ್‌ಗೆ ಡಾಕ್ಟರ್ ಒಮ್ಮೆ ಭೇಟಿ ಕೊಡಬೇಕು ಮತ್ತು ಅಲ್ಲಿರತಕ್ಕ ಜನರ ತಪಾಸಣೆ ಮಾಡಬೇಕು ಎಂದು ಇದೆ. ಅವರ ಕ್ಷೇತ್ರದಲ್ಲಿ ಅದಾಗದಿದ್ದರೆ ನಿರ್ದಿಷ್ಟವಾಗಿದ್ದರೆ ಅದಕ್ಕೆ ಕ್ರಮ ಕೈಗೊಂಡು ಅಲ್ಲಿಯೂ ಹೋಗಿ ತಪಾಸಣೆ ಮಾಡಲು ನಾನು ಸೂಚನೆ ಕೊಡುತ್ತೇನೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ 1998-99ರಲ್ಲಿ ಕೈಗೊಂಡ ಗ್ರಾಮೀಣಾಭಿವೃದ್ಧಿ ಯೋಜನೆಗಳು.

589: (3541)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ 1998-99ರಲ್ಲಿ ಕೈಗೊಂಡಿರುವ ಗ್ರಾಮಾಣಾಭಿವೃದ್ಧಿ ಯೋಜನೆಗಳು ಯಾವುವು?

ಆ. ಇವುಗಳಿಗೆ ಸರ್ಕಾರ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು? ಹಾಗೂ 1998-99ರ ಅಂತ್ಯದೊಳಗೆ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ. 1. ಐ.ಆರ್.ಡಿ.ಪಿ

2. ಟ್ರೈಸಂ

3. ಡ್ವಾಕಾ

4. ನಿರ್ಮಲ ಕರ್ನಾಟಕ ಯೋಜನೆ.

5. ಗ್ರಾಮೀಣ ನೀರು ಸರಬರಾಜು ಯೋಜನೆ

6. ಜೆ.ಆರ್.ವೈ. ಶೇ. 15

7. ಜೆ.ಆರ್.ವೈ. ಶೇ 15

8. ಜೆ.ಆರ್.ವೈ ಶೇ.70

9. ಉದ್ಯೋಗ ಭರವಸೆ ಯೋಜನೆ

10. ದಶಲಕ್ಷ ಬಾವಿ ಯೋಜನೆ

11. ಇಂದಿರಾ ಆವಾಜ್

12. ಆಶ್ರಯ

13. ಅಂಬೇಡ್ಕರ್

14. ಭಾಗ್ಯಜ್ಯೋತಿ ಯೋಜನೆ

ಆ.

ಕಾರ್ಯಕ್ರಮ	ಅಕ್ಟೋಬರ್ 98ರ ವರೆಗಿನ ವೆಚ್ಚ (ಲಕ್ಷ ರೂಗಳಲ್ಲಿ)	1998.99ನೇ ಸಾಲಿನ ಅಂತ್ಯದೊಳಗೆ ಖರ್ಚು ಮಾಡಲಿರುವ ಅನುದಾನ (ಲಕ್ಷ ರೂಗಳಲ್ಲಿ)
1. ಐ.ಆರ್.ಡಿ.ಪಿ	7420	5230
2. ಟ್ರೈಸಂ	-	1530
3. ಡ್ವಾಕಾ	-	2500
4. ನಿರ್ಮಲ ಕರ್ನಾಟಕ	2580	4746
5. ಆರ್.ಡಬ್ಲ್ಯೂ.ಎಸ್	37430	22660
6. ಜೆ.ಆರ್.ವೈ ಶೇ.15	-	8020
7. ಜೆ.ಆರ್.ವೈ ಶೇ 15	9000	1800
8. ಜೆ.ಆರ್.ವೈ ಶೇ.70	23650	15790
9. ಉದ್ಯೋಗ ಭರವಸೆ	39867	111053

10. ದಶಲಕ್ಷ ಬಾವಿ	-	18000
11. ಇಂದಿರಾ ಆವಾಜ್	26390	24610
12. ಆಶ್ರಯ	28020	5230
13. ಅಂಬೇಡ್ಕರ್	11450	14770
14. ಭಾಗ್ಯಜ್ಯೋತಿ ಯೋಜನೆ	350	300
	(ಫಲಾನುಭವಿಗಳು)	(ಫಲಾನುಭವಿಗಳು)

ಶ್ರೀ ಎನ್.ವೈ.ಗೋಪಾಲಕೃಷ್ಣ: ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರತಕ್ಕ 1998-99ನೇ ಸಾಲಿನ ಉತ್ತರಗಳು ಸಮಂಜಸವಾಗಿದೆ. ಆದರೆ ನನ್ನ ಮುಖ್ಯವಾದ ಪ್ರಶ್ನೆ ಎಂದರೆ ಇತ್ತೀಚೆಗೆ ಮಳೆಯಿಂದ ತುತ್ತಾಗಿರತಕ್ಕ, ಪ್ರಕೃತಿ ವಿಕೋಪದಿಂದಾಗಿ ಸುಮಾರು 400-500 ಮನೆಗಳಷ್ಟು ನಷ್ಟವಾಗಿದೆ. ಅದಕ್ಕೆ ಸರ್ಕಾರದವರು ಒಂದು ಸಮೀಕ್ಷೆಯನ್ನು ನಡೆಸಿದ್ದಾರೆ. ಅದು ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಸಿದಂತಹ ಸಮೀಕ್ಷೆಯ ವರದಿಯ ಆಧಾರದ ಮೇಲೆ ಪ್ರತಿ ಒಂದು ತಾಲ್ಲೂಕಿನಲ್ಲಿ ಹೆಚ್ಚುವರಿ ಮನೆಗಳನ್ನು ಕೊಟ್ಟಿರುತ್ತಾರೆ. ಆದರೆ ಮೊಣಕಾಲ್ಮೂರು ತಾಲ್ಲೂಕಿಗೆ ಮಾತ್ರ ಸುಮಾರು 400 ಮನೆಗಳನ್ನು ಕಳೆದುಕೊಂಡರೂ ಸಹ ಇವತ್ತು ಬೀದಿ ಪಾಲಾಗಿರತಕ್ಕ ಜನಗಳಿಗೆ ಯಾವ ರೀತಿ ಮನೆಗಳನ್ನು ಒದಗಿಸತಕ್ಕ ವ್ಯವಸ್ಥೆ ಇಲ್ಲಿಲ್ಲ. ಸಮೀಕ್ಷೆಯ ಆಧಾರದ ಮೇಲೆ ಕೂಡ ಇತರೇ ತಾಲ್ಲೂಕಿಗೆ ಕೊಟ್ಟಂತಹ ಹೆಚ್ಚುವರಿ ಮನೆಗಳನ್ನು ನನ್ನ ತಾಲ್ಲೂಕಿಗೆ ಕೊಡಲಿಲ್ಲ. ಇದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಾಗಲಿಲ್ಲ. ಈಗಲಾದರೂ ಕನಿಷ್ಟ ಹೆಚ್ಚುವರಿ ಮನೆಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತಾರೆಯೇ ಎಂದು ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ಈ ಹೆಚ್ಚುವರಿ ಮನೆಗಳನ್ನು ಕೊಟ್ಟಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಅವರು ಜಿಲ್ಲಾ ಪಂಚಾಯತಿಯವರು ಪ್ರಾಯಶಃ ಲಭ್ಯವಿರುವಂತಹ ಮನೆಗಳಲ್ಲಿ ಶೇಕಡಾ 10 ಮನೆಗಳನ್ನು ನೀವು ಬೇರೆ ಬೇರೆ ಸಂದರ್ಭಗಳಿಗಾಗಿ, ಇಂತಹ ಅತಿವೃಷ್ಟಿ ಅನಾಹುತ ಆದಂತಹ ಸಂದರ್ಭಗಳು ಅಥವಾ ಅನಾವೃಷ್ಟಿ, ಬೆಂಕಿ ಅನಾಹುತ ಆದಂತಹ ಸಂದರ್ಭದಲ್ಲಿ ಅದನ್ನು ಉಪಯೋಗಿಸಿಕೊಳ್ಳಬೇಕು ಎಂದು ನಾವು ಸುತ್ತೋಲೆಯನ್ನು ಕಳುಹಿಸಿ ಕೊಟ್ಟಿದ್ದೇವೆ. ಆ ಪ್ರಕಾರ ನಿಮ್ಮ ತಾಲ್ಲೂಕಿನಲ್ಲೇ ಇಟ್ಟುಕೊಂಡಿದ್ದಾರೋ ಅಥವಾ ಜಿಲ್ಲಾ ಮಟ್ಟದಲ್ಲಿ ಇಟ್ಟುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಈ ದಿವಸವೇ ನಾನು ಚಿತ್ರದುರ್ಗ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯ ಜೊತೆಗೆ ಮಾತನಾಡಿ ಅವರು ಹೆಚ್ಚುವರಿ ಇರತಕ್ಕ ಮನೆಗಳನ್ನು ಬೇರೆ ಕಡೆಗೆ ಕೊಟ್ಟಿದ್ದರೆ, ಅದನ್ನು ಖಂಡಿತವಾಗಿಯೂ ಕೊಡುತ್ತೇನೆ.

ಅಥವಾ ಆಶ್ರಯ ಯೋಜನೆಯಲ್ಲಿ ಹೆಚ್ಚುವರಿ ಮನೆಗಳನ್ನು ಅವರು ವಿಶೇಷವಾಗಿ ಪಡೆದಿದ್ದರೆ ಅದು ನನ್ನ ಇಲಾಖೆಗೆ ಬರುವುದಿಲ್ಲ. ಆಶ್ರಯ ಯೋಜನೆಯ ನನ್ನ ಸಹೋದ್ಯೋಗಿಗಳ ಜೊತೆ ಮಾತನಾಡಿ ತಮ್ಮ ಮೊಣಕಾಲ್ಮೂರಿಗೂ ಕೊಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಎನ್.ವೈ.ಗೋಪಾಲಕೃಷ್ಣ: ಈ ದಿವಸವೇ ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತನಾಡಿ ಅದರ ಬಗ್ಗೆ ಉತ್ತರ ಕೊಡಿಸಬೇಕು.

ಉಪಾಧ್ಯಕ್ಷರು: ಆಯಿತು. ಮಾನ್ಯ ಶಿವರಾಮ್‌ರವರೆ, ತಮ್ಮ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಶಿವರಾಮು: ನನಗೆ ವಿಷಯ ಗೊತ್ತಾಗಿದೆ. ಆದರೆ ಪ್ರಶ್ನೆಗೆ ಮಾಹಿತಿ ಮಾನ್ಯ ಶಿಕ್ಷಣ ಸಚಿವರಿಂದ ಬೇಕೇ ಬೇಕು ಎಂದೇನೂ ಇಲ್ಲ. ಏಕೆಂದರೆ ಇದು ಬಹಳ ಮಹತ್ವ

ಉಪಾಧ್ಯಕ್ಷರು: ಅವರು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಶಿವರಾಮು: ಅವರು ಕಾಲಾವಕಾಶವನ್ನು ಕೇಳಿದ್ದಾರೆ, ನಿಜ. ಆದರೆ ಇವತ್ತಿನ ಸದನ ಮುಗಿಯುತ್ತದೆ. ಇದು ನಿಮ್ಮ ಕ್ಷೇತ್ರದಲ್ಲಿ ಅಲ್ಲದೇ ಎಲ್ಲಾ ಕ್ಷೇತ್ರದಲ್ಲೂ ಇರತಕ್ಕ ಸಮಸ್ಯೆ. ಎಲ್ಲಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸಮಸ್ಯೆ ಇದೆ.

ಉಪಾಧ್ಯಕ್ಷರು: ಅವರಿಗೇನು ಸಮಸ್ಯೆ ಇದೆಯೋ ಅದನ್ನು ನಾವು ತಿಳಿದುಕೊಳ್ಳಬೇಕಲ್ಲಾ.

ಶ್ರೀ ಬಿ.ಶಿವರಾಮು: ಅವರು ಹೇಳುತ್ತಾರೆ, ತಾವು ಒಂದು ನಿಮಿಷ ಅವಕಾಶ ಕೊಟ್ಟರೆ ಸಾಕು. ಎಲ್ಲಾ ಜಿಲ್ಲೆಯಲ್ಲೂ ಸಮಸ್ಯೆ ಇದೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕಾಲಾವಕಾಶವನ್ನು ಕೇಳಿದ್ದೇನೆ. ಅವರ ಸಮಸ್ಯೆ ನನ್ನ ಸಮಸ್ಯೆಯೇ. ರಾಜ್ಯದ ಸಮಸ್ಯೆಯೇ. ಇದರ ಬಗ್ಗೆ ಸರ್ಕಾರ ಬಹಳ ದೀರ್ಘವಾಗಿ ಯೋಚನೆ ಮಾಡಿ ಏನು ಮಾಡುವುದಕ್ಕೆ ಸಾಧ್ಯ ಎಂದು ಹೇಳಿ ಯೋಚನೆ ಮಾಡುತ್ತಿದ್ದೇವೆ. ಅಲ್ಲಿಂದ ಬಂದ ತಕ್ಷಣ ನಿಮಗೂ ತಿಳಿಸುತ್ತೇವೆ, ರಾಜ್ಯಕ್ಕೂ ಗೊತ್ತಾಗುತ್ತದೆ.

ಶ್ರೀ ಬಿ.ಶಿವರಾಮು: ನಾನು ಪ್ರಸ್ತಾಪ ಮಾಡುವುದಿಲ್ಲ. ಇವತ್ತು ಶಿಕ್ಷಕರು ಆಯ್ಕೆಯಾಗಿ 25 ಪರ್ಸೆಂಟ್ ಏನು ವೈಟಿಂಗ್ ಲಿಸ್ಟ್ ಇಟ್ಟಿದ್ದಾರೆ, ಅವರು ಸಂಘವನ್ನು ಮಾಡಿಕೊಂಡು ಎಲ್ಲಾ ಶಾಸಕರ ರೂಮನ್ನು ಸುತ್ತುತ್ತಿದ್ದಾರೆ. ಯಾರ ರೂಮಿಗೆ ಅವರು ಬಂದಿಲ್ಲ? ಯಾರಿಗೆ ಸಮಸ್ಯೆ ಇಲ್ಲ? ಏನಾದರೂ ಒಂದು ನಿರ್ದಿಷ್ಟವಾಗಿ ಸರ್ಕಾರ ಮಾಡುತ್ತದೆ ಎಂದು ತಿಳಿದರೆ ಆ ಆಯ್ಕೆಯಾದಂತಹ ಶಿಕ್ಷಕರು ಊರಿಗೆ ಹೋಗಿ

ಬಿಡುತ್ತಾರೆ. ಅದಕ್ಕೋಸ್ಕರ ಏನು ತೀರ್ಮಾನ ಆಗುತ್ತದೆ ಎಂದು ನಮಗೆ ಒಂದು ಸ್ಪಷ್ಟೀಕರಣ ಅಷ್ಟೇ ನಮಗೆ ಬೇಕಾಗಿದೆ. ನಿಮ್ಮ ಅಂಕಿ ಅಂಶ ನಮಗೇನೂ ಬೇಕಾಗಿಲ್ಲ. ಎಲ್ಲಾ ಜಿಲ್ಲೆಯದ್ದೂ ಪ್ರಕಟಣೆ ಮಾಡಿದ್ದಾರೆ. ಶಿಕ್ಷಕರು ಎಷ್ಟು ಜನ? 25 ಪರ್ಸೆಂಟ್ ಎಕ್ಸಸ್ ಬಗ್ಗೆ ಎಲ್ಲಾ ಜಿಲ್ಲೆಯಲ್ಲಿ ಪ್ರಕಟಣೆ ಆಗಿದೆ.

12.00 ಪಿಎಂ

ಅಷ್ಟೇ ಅಲ್ಲ, ಅವರ ಆಯ್ಕೆ ಪಟ್ಟಿಯಲ್ಲಿ ಸಂಬಂಧಿಸಿದ ಜಾತಿ ಪ್ರಮಾಣ ಪತ್ರ, ಸರ್ಟಿಫಿಕೇಟ್ ಮುಂತಾದ ಅಗತ್ಯವಿರುವ ಪ್ರತಿಯೊಂದು ದಾಖಲೆಗಳನ್ನು ವೆರಿಫೈ ಮಾಡಿಸಿದ್ದಾರೆ, ಕೊಡಬೇಕೆಂಬ ಕಾಳಜಿ ಕೂಡ ಮಂತ್ರಿಗಳಿಗೆ ಇದೆಯೆಂದು ನಮಗೆ ಮನವರಿಕೆಯಾಗಿದೆ. ಆದುದರಿಂದ, ಇಂತಿಷ್ಟು ದಿವಸದೊಳಗೆ ಕೊಡುತ್ತೇವೆಂಬ ಬಗ್ಗೆ ಸ್ಪಷ್ಟಪಡಿಸಿದರೆ ಆಯ್ಕೆಯಾದವರು ತೃಪ್ತಿಗೊಂಡು ನೆಮ್ಮದಿಯಾಗಿ ತಮ್ಮತಮ್ಮ ಮನೆಗಳಿಗೆ ಹೋಗುತ್ತಾರೆ.

ಶ್ರೀ ಎ.ಟಿ.ರಾಮಸ್ವಾಮಿ: ಈಗ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಶಿಕ್ಷಕರುಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ: ಶೇಕಡಾ 25ರಷ್ಟು ರಿಸರ್ವೇಷನ್ ಮಾಡಿದ್ದೇವೆ, ಕಾನೂನಿನ ಚೌಕಟ್ಟಿನೊಳಗೆ ಇವೊತ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಕಳೆದೆರಡು ದಿವಸಗಳಿಂದ ನಮ್ಮ ಇಲಾಖಾಧಿಕಾರಿಗಳು ಕಾನೂನು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರೊಂದಿಗೆ ಕುಳಿತುಕೊಂಡು ಈ ಕುರಿತು ಏನು ಮಾಡಲು ಸಾಧ್ಯವಿದೆಯೆಂಬ ಬಗ್ಗೆ ಯೋಚನೆ ಮಾಡಲಾಗುತ್ತಿದೆ. ಸರ್ಕಾರಕ್ಕೆ ಕಾಳಜಿ ಇದ್ದುದರಿಂದಲೇ ಉಪಾಧ್ಯಾಯರುಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದಲೇ ನಾವು ಶೇಕಡಾ 25ರಷ್ಟು ರಿಸರ್ವೇಷನ್ ಮಾಡಿರುವುದು. ಆದರೆ, ಇದರ ಬಗ್ಗೆ ನಾನು ಪ್ರಾಮಿಸ್ ಮಾಡಲು ಹೋಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಶೇಕಡಾ 25ರಷ್ಟು ರಿಸರ್ವೇಷನ್ ಮಾಡುವುದಕ್ಕೆ, ಅಂದರೆ ವೈಟಿಂಗ್ ಲಿಸ್ಟ್ ಇಡುವುದಕ್ಕೆ ನಿಮಗೆ ರೂಲ್ಸ್‌ನಲ್ಲಿ ಅವಕಾಶವಿದ್ದರೆ ಮಾಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ರೂಲ್ಸ್‌ನಲ್ಲಿ ಅವಕಾಶವಿದೆ. ಈಗ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕಾದರೆ ಎಷ್ಟನ್ನು ಮಾಡಬೇಕು ಅಥವಾ ಅಲ್ಲಿ ಎಷ್ಟು ವೇಕೆನ್ಸಿ ಇರುತ್ತದೋ ಅಷ್ಟಕ್ಕೆ ಮಾತ್ರ ಕೊಡಬೇಕೇ? ಎಂಬ ಬಗ್ಗೆ ಚಿಂತನೆಯಾಗುತ್ತಿದೆ. ತಾವು ಇದರ ಬಗ್ಗೆ ಏನು ಹೇಳುತ್ತಿದ್ದೀರಿ, ಅವರು ನಮ್ಮ ಹತ್ತಿರವೂ ಬಂದಿದ್ದಾರೆ, ನಿಮ್ಮಗಳ ಹತ್ತಿರವೂ ಬಂದು ಕೇಳಿದ್ದಾರೆ. ನಮಗೆ ಅವರ

ಅವಶ್ಯಕತೆಯಿದೆ, ಅದರ ಬಗ್ಗೆ ಎರಡು ಪ್ರಶ್ನೆಯಿಲ್ಲ. ಆದರೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಕಾನೂನು ಇಲಾಖೆಯ ಚೌಕಟ್ಟಿನೊಳಗೆ ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬ ಬಗ್ಗೆ ನಮ್ಮ ಇಲಾಖಾಧಿಕಾರಿಗಳು ಕಳೆದೆರಡು ದಿವಸಗಳಿಂದ ಚರ್ಚೆ ಮಾಡುತ್ತಿದ್ದು ಇದರ ಬಗ್ಗೆ ಚಿಂತನೆ ನಡೆಯುತ್ತಿದೆ.

ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯುವ ಬಗ್ಗೆ.

591: (4130)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ತಾಲ್ಲೂಕಿನ ಚಿವಟಗುಂಡಿ, ಅವಟೂರ ಹಾಗೂ ಸವದತ್ತಿ ತಾಲ್ಲೂಕಿನ ಕುಟರನಟ್ಟಿ ಗ್ರಾಮಗಳಲ್ಲಿ ಆಯುರ್ವೇದ ಆಸ್ಪತ್ರೆ ತೆರೆಯುವ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿದೆಯೇ?

ಆ) ಬಂದಿದ್ದಲ್ಲಿ ಆರ್ಯುವೇದ ಆಸ್ಪತ್ರೆ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಚವಟಗುಂಡಿ ಗ್ರಾಮದಲ್ಲಿ ಆಯುರ್ವೇದ ಆಸ್ಪತ್ರೆ ತೆರೆಯಲು ಮನವಿಗಳು ಬಂದಿವೆ. ಅಮಟೂರ ಗ್ರಾಮ ಹಾಗೂ ಸವದತ್ತಿ ತಾಲ್ಲೂಕಿನ ಕುಟರನಟ್ಟಿ ಗ್ರಾಮಗಳಲ್ಲಿ ಆಯುರ್ವೇದ ಆಸ್ಪತ್ರೆಗಳನ್ನು ತೆರೆಯಲು ಮನವಿಗಳು ಬಂದಿರುವುದಿಲ್ಲ.

ಆ) ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ತೆರೆಯಲು ಬೆಳಗಾಂ ಜಿಲ್ಲಾ ಪಂಚಾಯತ್‌ನ ಯೋಜನೆಯಡಿ ಒದಗಿಸಲಾಗಿರುವ ಆಯವ್ಯಯವನ್ನು ಅವಲಂಬಿಸಿ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಹಾಂತೇಶ.ಎಸ್.ಕೌಜಲಗಿ: ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ಚಿವಟಗುಂಡಿ ಗ್ರಾಮದಲ್ಲಿ ಆಯುರ್ವೇದ ಆಸ್ಪತ್ರೆ ತೆರೆಯಲು ಮನವಿಗಳು ಬಂದಿವೆಯೆಂದು ಸಚಿವರು ಹೇಳಿದ್ದಾರೆ. ಆದರೆ, ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ತೆರೆಯಲು ಬೆಳಗಾಂ ಜಿಲ್ಲಾ ಪಂಚಾಯತ್‌ನ ಯೋಜನೆಯಡಿ ಒದಗಿಸಲಾಗಿರುವ ಆಯವ್ಯಯವನ್ನು ಅವಲಂಬಿಸಿ ಮಂಜೂರಾತಿಗೆ ಕ್ರಮ